ಶ್ರೀ ಹೆಚ್. ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗ ಪ್ರಥಮ ದರ್ಜೆ ಕಾಲೇಜಿನಲ್ಲಿ admission ನಡೆಯುತ್ತಿದೆ. ಈಗ ಬಿ. ಕಾಂ., ಗೆ ತುಂಬಾ demand ಇದೆ. ದಯಮಾಡಿ ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚುವರಿ ಸೆಕ್ಷನ್ ಗಳನ್ನು ಪ್ರಾರಂಭ ಮಾಡುವುದಕ್ಕೆ ತಾವು ಅನುಮತಿಯನ್ನು ನೀಡಿ, ತಾವು ಒಂದು ಆದೇಶ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ: ನಾನು ತಮಗೆ ಉತ್ತರವನ್ನು ಕೊಟ್ಟಿದ್ದೇನೆ. ತಾವು ಹೇಳಿದ ಹಾಗೆ ಬಿ.ಕಾಂ.,ಗೆ ಸಾಕಷ್ಟು ಬೇಡಿಕೆ ಬಂದಿರುವುದು ನಿಜ. 2013–14ನೇ ಸಾಲಿನಲ್ಲಿ 66 ಕಡೆ permission ಕೊಟ್ಟು ಹೊಸ ಸೆಕ್ಷನ್ ಪ್ರಾರಂಭ ಮಾಡಲಾಗಿದೆ. ಈ ವರ್ಷ 2014–15ನೇ ಸಾಲಿನಲ್ಲಿ ಕಾಮರ್ಸ ನ 47 ಹೆಚ್ಚುವರಿ ಸೆಕ್ಷನ್ ಪ್ರಾರಂಭ ಮಾಡಿದ್ದೇವೆ. ಎಲ್ಲೆಲ್ಲಿ ಬೇಡಿಕೆಗಳು ಬರುತ್ತಿವೆ, ಅಲ್ಲಿ ಅನುಮತಿ ಕೊಟ್ಟಿದ್ದೇನೆ. ನಾನು ಅಧಿಕಾರ decentralize ಮಾಡಿದ್ದೇನೆ. ಅಲ್ಲಿನ ಕಮಿಷನರ್‌ಗೆ ನೀವು permission ಕೊಟ್ಟು, ನಂತರ ನಮಗೆ ಫೈಲ್ ಕಳುಹಿಸಿ ಎಂದು ಹೇಳಿದ್ದೇನೆ. ಆದ್ದರಿಂದ ಮಾಗಡಿ ಅಥವಾ ಎಲ್ಲೆಲ್ಲಿ demand ಇದೆಯೆಂದು ಹೇಳಿ, ನಾಳೆಯೇ ಮಾಡಿಕೊಡುತ್ತೇವೆ.

iv) ವಿಷಯ: ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದಲ್ಲಿ ನಬಾರ್ಡ ಯೋಜನೆಯಡಿ ಹೆರಿಗೆ ಮತ್ತು ಆಸ್ಪತ್ರೆ ಮಂಜೂರಾಗಿದ್ದು ಇನ್ನೂ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಾರಂಭವಾಗದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದಲ್ಲಿ ನಬಾರ್ಡ ಯೋಜನೆಯಡಿ ಹೆರಿಗೆ ಮತ್ತು ಆಸ್ಪತ್ರೆ ಮಂಜೂರಾಗಿದ್ದು ಇನ್ನೂ ಕಟ್ಟದ ನಿರ್ಮಾಣ ಕಾಮಗಾರಿಯು ಪ್ರಾರಂಭವಾಗದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಆರೋಗ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಆರೋಗ್ಯ ಸಚಿವರ ಪರವಾಗಿ) ದಿನಾಂಕ: 07.08.2013 ರಂದು ನಡೆದ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ನಬಾರ್ಡ ಅನುದಾನದ ಆರ್.ಐ.ಡಿ.ಎಫ್.–10 ರಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸುವ ಕಾಮಗಾರಿಗೆ 2013–14 ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ₹9340.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ನಬಾರ್ಡ ಪ್ರಾಧಿಕಾರವು ದಿನಾಂಕ: 07.02.2014ರ ಪತ್ರದಲ್ಲಿ ರಾಜ್ಯದ ಈ ಕೆಳಕಂಡ 9 ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗಳನ್ನು Monthly Bed Occupancy Rate ಅನ್ನು ಆಧರಿಸಿ ವಿವಿಧ ಸಾಮರ್ಥ್ಯದ ಆಸ್ಪತ್ರೆಗಳನ್ನು ನಿಮಿಸುವ ಕಾಮಗಾರಿಗಳಿಗೆ ಸಹಮತ ನೀಡಿರುತ್ತದೆ.

ಕ್ರ.ಸಂ.	ಜಿಲ್ಲೆ	ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ವಿವರ
1	ಹಾಸನ	ಹೊಳೆನರಸೀಪುರ
2	ಬೆಂಗಳೂರು (ಗ್ರಾ)	ದೊಡ್ಡಬಳ್ಳಾಪುರ
3	ಚಾಮರಾಜನಗರ	ಗುಂಡ್ಲುಪೇಟೆ
4	ಬೀದರ್	ಬಸವಕಲ್ಯಾಣ
5	ಬಾಗಲಕೋಟೆ	ಇಳಕಲ್ಲು
6	ಬಾಗಲಕೋಟೆ	ಬಾಗಲಕೋಟೆ

7	ಉತ್ತರ ಕನ್ನಡ	ದಾಂಡೇಲಿ
8	ಬಿಜಾಪುರ	ಬಿಜಾಪುರ
9	ಹಾವೇರಿ	ಹಾವೇರಿ

ಈ 9 ಕಾಮಗಾರಿಗಳ ಪೈಕಿ ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದಲ್ಲಿ 30 ಹಾಸಿಗೆಗಳ ಸಾಮರ್ಥ್ಯವುಳ್ಳ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ವಿಭಾಗ ಕಟ್ಟಡವು ಒಳಗೊಂಡಿರುತ್ತದೆ. ಸದರಿ ಕಾಮಗಾರಿಯ ಒಟ್ಟು ಅಂದಾಜು ಮೊತ್ತವು ₹ 759.00 ಲಕ್ಷಗಳಿರುತ್ತವೆ. ಸದರಿ ಅಂದಾಜು ಪಟ್ಟಿಯಲ್ಲಿ ಆಸ್ಪತ್ರೆ ಕಟ್ಟಡವಲ್ಲದೆ 4 ವೈದ್ಯರ, 4 ಶುಶ್ರೋಷಕಿಯರ, 4 ಡಿ–ಗ್ರೂಪ್ ವರ್ಗದ ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಹಾಗೂ ಆಸ್ಪತ್ರೆಗೆ ಅವಶ್ಯವಿರುವ ಉಪಕರಣಗಳ ಖರೀದಿಗಾಗಿ ಅನುವು ಮಾಡಿಕೊಳ್ಳಲಾಗಿರುತ್ತದೆ. ಎಲ್ಲಾ 9 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಆರ್ಥಿಕ ಇಲಾಖೆಯ ಸಹಮತಕ್ಕಾಗಿ ಸಲ್ಲಿಸಲಾಗಿರುತ್ತದೆ.

ಈ ಮೇಲಿನ 9 ಕಾಮಗಾರಿಗಳ ನಿರ್ಮಾಣಕ್ಕೆ ಅವಶ್ಯವಿರುವ ರೂ. 9019.00 ಲಕ್ಷಗಳ ಪೈಕಿ ₹7666.15 ಲಕ್ಷಗಳನ್ನು ನಬಾರ್ಡ ಪ್ರಾಧಿಕಾರವು ಸಾಲವಾಗಿ ಭರಿಸುತ್ತಿದ್ದು, ಇನ್ನುಳಿದ ₹1352.85 ಲಕ್ಷಗಳನ್ನು ಸರ್ಕಾರವು ಭರಿಸಬೇಕಿರುತ್ತದೆ. ಕಾಮಗಾರಿಗಳ ಅಂದಾಜು ಮೊತ್ತವು ₹5.00 ಕೋಟಿಗಳಿಗೂ ಮೀರಿರುವುದರಿಂದ ಸದರಿ ಪ್ರಸ್ತಾವನೆಗಳಿಗೆ ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳ 1977 ರ ಮೊದಲನೇ ಅನುಸೂಚಿಯ ಕ್ರಮ ಸಂಖ್ಯೆ: 15ರ ಪ್ರಕಾರ ಸಚಿವ ಸಂಪುಟ ಅನುಮೋದನೆ ಅವಶ್ಯವಿರುತ್ತದೆ.

9 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿದ ಕೂಡಲೇ ಟೆಂಡರ್‌ಗಳನ್ನು ಆಹ್ವಾನಿಸಿ, ಕಾಮಗಾರಿಗಳನ್ನು ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅಲ್ಲಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಬಗ್ಗೆ ನಬಾರ್ಡನ ಅನುದಾನವನ್ನು ತೆಗೆದುಕೊಂಡು ಮಾಡ ಬೇಕೆಂದು ಇತ್ತು. ಅದರ ಬಗ್ಗೆ ಏನಾಗಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ರೇವಣ್ಣನವರೆ, ಅದಕ್ಕೆ ಸ್ಪಷ್ಟ ಉತ್ತರವನ್ನು ಕೊಟ್ಟಿದೆ.

ಶ್ರೀ ಹೆಚ್. ಡಿ. ರೇವಣ್ಣ: ಅದನ್ನು ಬೇಗ ಮಾಡಿಸಿಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ಇದು ಕ್ಯಾಬಿನೆಟ್‌ನಲ್ಲಿ ಅನುಮೋದನೆಗೆ ಬರಬೇಕೆಂದು ಹೇಳಿದ್ದಾರೆ. ಆದಷ್ಟು ಬೇಗ ಕ್ಯಾಬಿನೆಟ್‌ಗೆ ಕಳುಹಿಸಿಕೊಡುತ್ತೇನೆ.

v) ವಿಷಯ: ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಅಲಮೇಲ ಗ್ರಾಮವು ಈಗಾಗಲೇ ಹೋಬಳಿ ಕೇಂದ್ರವಾಗಿದ್ದು, ಪಿ.ಎಸ್.ಐ. ಮಟ್ಟದ ಪೊಲೀಸ್ ಠಾಣೆ, ಹಲವಾರು ಶಿಕ್ಷಣ ಸಂಸ್ಥೆಗಳು, ಪದವಿ ಕಾಲೇಜು ಹಾಗೂ ವಾಣಿಜ್ಯ ಬ್ಯಾಂಕ್‌ಗಳನ್ನು ಹೊಂದಿದ್ದು, ಅಲಮೇಲ ಹೋಬಳಿಯನ್ನು ಹೊಸ ತಾಲ್ಲೂಕನ್ನಾಗಿ ಘೋಷಣೆ ಮಾಡುವ ಬಗ್ಗೆ.

ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ): ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಅಲಮೇಲ ಗ್ರಾಮವು ಈಗಾಗಲೇ ಹೋಬಳಿ ಕೇಂದ್ರವಾಗಿದ್ದು, ಪಿ.ಎಸ್.ಐ. ಮಟ್ಟದ ಪೊಲೀಸ್ ಠಾಣೆ, ಹಲ ವಾರು ಶಿಕ್ಷಣ ಸಂಸ್ಥೆಗಳು, ಪದವಿ ಕಾಲೇಜು ಹಾಗೂ ವಾಣಿಜ್ಯ ಬ್ಯಾಂಕ್ ಗಳನ್ನು ಹೊಂದಿದ್ದು, ಅಲಮೇಲ ಹೋಬಳಿಯನ್ನು ಹೊಸ ತಾಲ್ಲೂಕನ್ನಾಗಿ ಘೋಷಣೆ ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್, ಸಹಕಾರ ಸಚಿವರು (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.